# ಕರ್ನಾಟಕ ಸರ್ಕಾರ

ಸಂಖ್ಯೆ:ಕಪಂರಾಅ/ಅಭಿವೃದ್ಧಿ/79/2020(ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:29-12-2020.

## ಸುತ್ತೋಲೆ

**ವಿಷಯ** "**ಮನೆ-ಮನೆ ಸಮೀಕ್ಷೆ**"ಯಲ್ಲಿ ಗುರುತಿಸಲಾದ ಶಾಲೆ/ಅಂಗನವಾಡಿಯಿಂದ ಹೊರಗುಳಿದ ಮಕ್ಕಳನ್ನು ಶಾಲೆ/ಅಂಗನವಾಡಿಯ ಮುಖ್ಯವಾಹಿನಿಗೆ ಸೇರಿಸಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು

**ಉಲ್ಲೇಖ:** 1)ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ **1061** ಗ್ರಾಪಂಅ **2019**, ದಿನಾಂಕ: **11.12.2019.**
2)ಸರ್ಕಾರದ ಇದೇ ಸಮ ಸಂಖ್ಯೆಯ ಪತ್ರ ದಿನಾಂಕ: **16.12.2019.**
3)ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:**15768/ 2013** ವಿಚಾರಣೆ ಸಂದರ್ಭದಲ್ಲಿ ನೀಡಿದ ಆದೇಶ ದಿನಾಂಕ: **18.12.2019.**
4)ಸರ್ಕಾರದ ಸುತ್ತೋಲೆ ಸಂಖ್ಯೆ: ಕಪಂರಾಅ/ ಅಭಿವೃದ್ಧಿ**/79/2020**, ದಿನಾಂಕ:**04.12.2020**.

***

ಭಾರತ ಸಂವಿಧಾನದ ಕಲಂ **21(ಎ)** ಪ್ರಕಾರ **6** ರಿಂದ **14** ವರ್ಷದ ಪ್ರತಿ ಮಗು **8** ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ. ಉಲ್ಲೇಖ **(1)** ರ ಸುತ್ತೋಲೆ ಮತ್ತು ಉಲ್ಲೇಖ **(2)** ರ ಸರ್ಕಾರದ ಪತ್ರದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು ಸ್ಥಳೀಯ ಸರ್ಕಾರಗಳು ಕೈಗೊಳ್ಳಬೇಕಾದ ಕಾರ್ಯಕ್ರಮದ ಮಾರ್ಗಸೂಚಿಗಳ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು **The Karnataka Right of Children to Free and Compulsory Education Rules,2012** ರನ್ವಯ ಗ್ರಾಮ ಪಂಚಾಯಿತಿಗಳು ಗ್ರಾಮ ಶಿಕ್ಷಣ ರಿಜಿಸ್ಟರ್ನ್ನು ನಿರ್ವಹಿಸಬೇಕಾಗಿರುತ್ತದೆ.ಈ ಬಗ್ಗೆ ಉಲ್ಲೇಖ **(1)** ರ ಸುತ್ತೋಲೆಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳು ಗ್ರಾಮ ಶಿಕ್ಷಣ ರಿಜಿಸ್ಟರ್ ನಿರ್ವಹಿಸಲು ತಿಳಿಸಲಾಗಿದೆ. **The Karnataka Right of Children to Free and Compulsory Education (Amendment) Rules, 2014** ರನ್ವಯ ಮಕ್ಕಳ ಹಾಜರಾತಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, **1993** ರ ಪ್ರಕರಣ **58** ರಲ್ಲಿ ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳ ಬಗ್ಗೆ ವಿವರಿಸಲಾಗಿದ್ದು, ಅದರಲ್ಲಿ ಗ್ರಾಮ ಪಂಚಾಯಿತಿಯು ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು ಪ್ರಮುಖವಾದ ಕಡ್ಡಾಯ ಕಾರ್ಯ ವಾಗಿರುತ್ತದೆ.

ಉಲ್ಲೇಖ **(3)** ರ ರಿಟ್ ಪಿಟಿಷನ್ ವಿಚಾರಣೆ ಸಂದರ್ಭದಲ್ಲಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

**"We make it clear the responsibility of carrying out a door-to-door survey shall be of the local authorities and the task cannot be delegated to the teachers in the schools. While carrying out the survey, in case of students who have permanently abandoned the school, the registration number of the students can be of a great help. This aspect shall be borne in mind by the local authorities."**

**ಪ್ರಕರಣವು ಉಚ್ಚ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ತರಲು ನಿಖರವಾದ ಕ್ರಮಗಳನ್ನು ಸರ್ಕಾರದ ವತಿಯಿಂದ ಕೈಗೊಂಡು ಮಾನ್ಯ ನ್ಯಾಯಾಲಯಕ್ಕೆ ಅನುಪಾಲನಾ ವರದಿ ಸಲ್ಲಿಸಬೇಕಾಗಿರುತ್ತದೆ.**

ಮೇಲ್ಕಂಡ ಆದೇಶದ ಹಿನ್ನೆಲೆಯಲ್ಲಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದು ಅವಶ್ಯವಾಗಿದೆ. ಈ ಕಾರ್ಯದಲ್ಲಿ ಮಾನ್ಯ ನ್ಯಾಯಾಲಯವು ಆದೇಶಿಸಿರುವಂತೆ ಸ್ಥಳೀಯ ಗ್ರಾಮ ಪಂಚಾಯಿತಿಗಳು ಪ್ರಮುಖ ಪಾತ್ರ ವಹಿಸಬೇಕಾಗಿರುತ್ತದೆ. ಈ ದಿಶೆಯಲ್ಲಿ ಕೈಗೊಳ್ಳಬೇಕಾದ ಕಾರ್ಯ ಯೋಜನೆಯನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

1) **ಜನವರಿ 2021–** ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು/ಆಡಳಿತಾಧಿಕಾರಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸ್ಥಳೀಯ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷರು, ಶಾಲಾ ಮುಖ್ಯೋಪಾಧ್ಯಾಯರು, ಅಂಗನವಾಡಿ ಮೇಲ್ವಿಚಾರಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಇತರರನ್ನು ಒಳಗೊಂಡ **ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ ಮತ್ತು ಮಹಿಳಾ ಸ್ವ-ಸಹಾಯ ಸಂಘದ ಪ್ರತಿನಿಧಿಗಳ** ಸಭೆ ನಡೆಸಿ ಕಾರ್ಯಕ್ರಮದ ಮಹತ್ವವನ್ನು ಮನವರಿಕೆ ಮಾಡುವುದು ಮತ್ತು ಸಮೀಕ್ಷೆಯ ಎಲ್ಲಾ ಹಂತಗಳ ಉಸ್ತುವಾರಿ ವಹಿಸುವುದು. **ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ ಸದಸ್ಯರುಗಳು ಅವರವರ ಜವಾಬ್ದಾರಿಗಳನ್ನು ನಿರ್ದಿಷ್ಟಪಡಿಸಿಕೊಳ್ಳಬೇಕು.**

2) **ಜನವರಿ-2021– ಫೆಬ್ರವರಿ 2021** ಮೇಲ್ಕಂಡವರು ತಮ್ಮ ಶಾಲಾ ವ್ಯಾಪ್ತಿಯಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ಪ್ರತಿನಿಧಿಗಳ ಮೂಲಕ ಸಮೀಕ್ಷೆ ನಡೆಸಿ ಶಾಲೆಗೆ ದಾಖಲಾಗದ, ದಾಖಲಾದರೂ ಹಾಜರಾಗದ ಮಕ್ಕಳನ್ನು ಗುರುತಿಸುವುದು. ವಿಶೇಷ ಮನವೊಲಿಕೆ ಕಾರ್ಯಕ್ರಮ ಅವಶ್ಯವಿದ್ದಲ್ಲಿ ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರಿಂದ ಹಮ್ಮಿಕೊಳ್ಳುವುದು.

3) **ಫೆಬ್ರವರಿ -2021** – ಮೇಲ್ಕಂಡಂತೆ ಸಮೀಕ್ಷೆಯಲ್ಲಿ ಗುರುತಿಸಲಾದ ಮಕ್ಕಳನ್ನು ಶಾಲೆ/ಅಂಗನವಾಡಿಗೆ **ದಾಖಲಿಸಲು ಹಾಗೂ ಹಾಜರಾಗುವಂತೆ** ಮಾಡಲು ಕ್ರಮ ವಹಿಸುವುದು.

4) **ಮಾರ್ಚ್ 2021** – ಗ್ರಾಮ ಪಂಚಾಯಿತಿ ವತಿಯಿಂದ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರೊಡನೆ ಸಭೆ ನಡೆಸಿ ಶಾಲೆ/ಅಂಗನವಾಡಿಗೆ **ದಾಖಲಾದ ಮಕ್ಕಳ ಹಾಜರಾತಿ ಹಾಗೂ ಶೈಕ್ಷಣಿಕ ಪ್ರಗತಿ ಬಗ್ಗೆ ಪರಿಶೀಲನೆ.**

5) **ಮಾರ್ಚ್- 2021 - ಏಪ್ರಿಲ್-2021** ರಲ್ಲಿ ಇಡೀ ವರ್ಷದಲ್ಲಿ ಶಾಲೆ/ಅಂಗನವಾಡಿಯಿಂದ ಹೊರಗುಳಿದ ಮಕ್ಕಳ ದಾಖಲಾತಿ-ಹಾಜರಾತಿ ಪ್ರಕ್ರಿಯೆಯಲ್ಲಿ ಆದ ಪ್ರಗತಿ ಪರಾಮರ್ಶೆ ಮಾಡಿ ಮುಂದಿನ ವರ್ಷ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಕಾರ್ಯಯೋಜನೆ ಸಿದ್ಧಪಡಿಸುವುದು.

ಶಾಲೆ/ಅಂಗನವಾಡಿಯಿಂದ ಹೊರಗುಳಿದ ಮಕ್ಕಳು ಶಾಲೆ/ಅಂಗನವಾಡಿಗೆ ಹಾಜರಾಗದಿರಲು ವೈದ್ಯಕೀಯ ಕಾರಣಗಳು, ಆರ್ಥಿಕ ಕಾರಣಗಳು ಹಾಗೂ ಕೌಟುಂಬಿಕ ಕಾರಣಗಳು ಪ್ರಮುಖವಾದ ಕಾರಣಗಳಾಗಿರುತ್ತದೆ.

**1.** <u>ಅನಾರೋಗ್ಯ ಕಾರಣ ನೀಡಿದಲ್ಲಿ</u>:

- ಮಗುವಿನ ಮನೆಗೆ ಬೇಟಿ ನೀಡಿ ಮಗುವಿನ ಅನಾರೋಗ್ಯದ ಸ್ಥಿತಿಯನ್ನು ತಿಳಿದುಕೊಂಡು, ಅಗತ್ಯವಿದ್ದಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು.

- ಲಭ್ಯವಿರುವ ಸರ್ಕಾರಿ ಯೋಜನೆ ಅಡಿಯಲ್ಲಿ ಆರೋಗ್ಯ ಸೇವೆಗಳನ್ನು ಪಡೆಯಲು ನೆರವು ನೀಡುವುದು. ಮಗುವಿನ ಕುಟುಂಬದಲ್ಲಿ ಆರೋಗ್ಯ ಕಾರ್ಡ್ ಪಡೆದಿದ್ದಲ್ಲಿ ಸದರಿ ಕಾರ್ಡ್‌ನ ಪ್ರಯೋಜನ ಪಡೆಯಲು ಸಹಾಯ ಮಾಡುವುದು. ಆರೋಗ್ಯ ಕಾರ್ಡ್ ಇಲ್ಲದಿದ್ದಲ್ಲಿ ಆರೋಗ್ಯ ಕಾರ್ಡ್ ಪಡೆಯಲು ಸಹಕರಿಸುವುದು.

- ಆರೋಗ್ಯ ಸುಧಾರಣೆಯ ನಂತರ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಮೂಲಕ ಮಗುವನ್ನು ಶಾಲೆ/ಅಂಗನವಾಡಿಗೆ ದಾಖಲಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

- ಶಾಲೆ/ಅಂಗನವಾಡಿಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು. ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**2. <u>ವಿಶೇಷ ಅಗತ್ಯವುಳ್ಳ ಮಗುವಾಗಿದ್ದಲ್ಲಿ</u>:**

- ಮನೆಗೆ ಭೇಟಿ ನೀಡಿ ಮಗುವಿನ ದೈಹಿಕ/ಮಾನಸಿಕ ಸ್ಥಿತಿ ಕುರಿತು ಗಮನಿಸುವುದು.

- ವಿಶೇಷ ಚೇತನರ ಹಕ್ಕುಗಳ ಅಧಿನಿಯಮ **2016**ರಲ್ಲಿ ತಿಳಿಸಿರುವಂತೆ, ಅಂಗ ವೈಕಲ್ಯವನ್ನು ಪತ್ತೆ ಹಚ್ಚಲು ವೈದ್ಯಕೀಯ ತಪಾಸಣೆ ಆಗಿದ್ದು ಅರ್ಹರಿದ್ದಲ್ಲಿ ಸ್ವಾವಲಂಬನ ಕಾರ್ಡ್ ಪಡೆಯಲು ನೊಂದಣಿ ಹಾಗೂ ಅಗತ್ಯವಿರುವ ಸೌಲಭ್ಯಗಳನ್ನು ಪಡೆಯಲು ಸೂಕ್ತ ಕ್ರಮ ಕೈಗೊಳ್ಳುವುದು.

- ಒಂದು ವೇಳೆ ಅಂಗ ವೈಕಲ್ಯವನ್ನು ಪತ್ತೆ ಹಚ್ಚಲು ವೈದ್ಯಕೀಯ ತಪಾಸಣೆ ಆಗಿರದಿದ್ದಲ್ಲಿ ಗ್ರಾಮ ಪಂಚಾಯತಿ ಮಟ್ಟದ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿಯ ಮೂಲಕ ವೈದ್ಯಕೀಯ ತಪಾಷಣೆ ಮತ್ತು ಸ್ವಾವಲಂಬನ ಕಾರ್ಡ್ ಪಡೆಯಲು ಸಹಕರಿಸುವುದು.

- ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಂದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಮೂಲಕ ಸರಳ ಸಹಾಯಕ ಸಾಧನಗಳ ಮತ್ತು ಶ್ರವಣ ಸಾಧನಗಳು ಸೇರಿದಂತೆ ವಿವಿಧ ಸೇವೆಗಳು ಸಿಗುವಂತೆ ಕ್ರಮ ವಹಿಸುವುದು.

- ಶಾಲೆಗೆ ಬರಲು ಸಾಧ್ಯವಾಗದ ವಿಕಲ ಚೇತನ ಮಗುವಿಗೆ ಶಿಕ್ಷಣವನ್ನು ಮಗುವು ಇರುವೆಡೆಯಲ್ಲೇ ಅಂದರೆ ಮಗುವಿನ ಮನೆಯಲ್ಲಿಯೇ ಶಿಕ್ಷಣ ನೀಡಬೇಕಾಗುತ್ತದೆ. ಸದರಿ ಶಿಕ್ಷಣಕ್ಕೆ ಕ್ಷೇತ್ರ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು (BIERT) ಸ್ಥಳೀಯ ಶಿಕ್ಷಕ/ಶಿಕ್ಷಕಿಗೆ ತರಬೇತಿ ನೀಡುವುದು.

- ತರಬೇತಿ ಹೊಂದಿದ ಸ್ಥಳೀಯ ಶಿಕ್ಷಕ/ಶಿಕ್ಷಕಿ ಮಗುವಿಗೆ ಸಾಧ್ಯವಾಗುವ ಕನಿಷ್ಠ ಮಟ್ಟದ ಶಿಕ್ಷಣ ನೀಡಿ ಶಾಲಾ ಮುಖ್ಯವಾಹಿನಿಗೆ ತರುವುದು.

- ವಿಶೇಷ ಅಗತ್ಯ ಉಳ್ಳ ಮಗುವಿನ ನಿರ್ಧಿಷ್ಟ ಕಲಿಕಾ **ವೈಕಲ್ಯತೆ** (**Specific Learning Disability-SLD**)ಪತ್ತೆ ಹಚ್ಚುವುದು ಹಾಗೂ ಸಮನ್ವಯ ಶಿಕ್ಷಣ ತರಬೇತಿ ಹೊಂದಿದ ಸ್ಥಳೀಯ ಶಿಕ್ಷಕ/ಶಿಕ್ಷಕಿಯ ಮೂಲಕ ಮಗುವಿಗೆ ಸಾಧ್ಯವಾಗುವ ಕನಿಷ್ಠ ಮಟ್ಟದ ಶಿಕ್ಷಣ ನೀಡುವುದು.

- ಆಯಾ ತಾಲ್ಲೂಕಿನಲ್ಲಿರುವ ಶಿಕ್ಷಣ ಇಲಾಖೆಯ ಕ್ಷೇತ್ರ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು (**BIERT**),ಸ್ಥಳೀಯ ಶಿಕ್ಕಕ/ಶಿಕ್ಷಕಿಯರಿಗೆ ಸಮನ್ವಯ ಶಿಕ್ಷಣದ ತರಬೇತಿ ಆಗಿರುವುದು ಮತ್ತು ವಿಶೇಷ ಅಗತ್ಯ ಉಳ್ಳ ಮಕ್ಕಳ ಶಿಕ್ಷಣದ ಬಗ್ಗೆ ಅಗತ್ಯ ಉಸ್ತುವಾರಿ ವಹಿಸುವುದು.

- ಮಗುವಿನ ದಾಖಲೆಗಳನ್ನು ಶಾಲೆಯಲ್ಲಿ ನಿರ್ವಹಿಸುವುದು ಹಾಗೂ ಎಲ್ಲಾ ಮಕ್ಕಳಂತೆ ಈ ಮಕ್ಕಳಿಗೂ ಸೌಲಭ್ಯಗಳು ಲಭ್ಯವಾಗುವಂತೆ ಮಾಡುವುದು.

**3. ಮಗುವಿಗೆ ಅಪಘಾತವಾಗಿದ್ದಲ್ಲಿ:**

- ಮನೆಗೆ ಬೇಟಿ ನೀಡಿ ಅಪಘಾತದಿಂದ ಉಂಟಾದ ತೊಂದರೆ ಮತ್ತು ಪ್ರಸ್ತುತ ಪರಿಸ್ಥಿತಿಯನ್ನು ಕುರಿತು ಅವಲೋಕಿಸುವುದು ಹಾಗೂ ಅಗತ್ಯವಿದ್ದಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು.

- ಮಗುವಿನ ಕುಟುಂಬದಲ್ಲಿ ಆರೋಗ್ಯ ಕಾರ್ಡ್ ಪಡೆದಿದ್ದಲ್ಲಿ ಸದರಿ ಕಾರ್ಡ್‌ನ ಮೂಲಕ ಲಭ್ಯವಿರುವ ಸರ್ಕಾರಿ ಯೋಜನೆ ಅಡಿಯಲ್ಲಿ ಆರೋಗ್ಯ ಸೇವೆಗಳನ್ನು ಪಡೆಯಲು ನೆರವು ನೀಡುವುದು. ಆರೋಗ್ಯ ಕಾರ್ಡ್ ಇಲ್ಲದಿದ್ದಲ್ಲಿ ಆರೋಗ್ಯ ಕಾರ್ಡ್ ಪಡೆಯಲು ಸಹಕರಿಸುವುದು.

- **ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ** ಮೂಲಕ ಮಗುವು ಶಾಲೆ/ಅಂಗನವಾಡಿಗೆ ಹಾಜರಾಗಲು ಸಾಧ್ಯವಿದ್ದಲ್ಲಿ ಶಾಲೆಗೆ/ಅಂಗನವಾಡಿ ದಾಖಲಿಸುವುದು. ಅಥವಾ ಆರೋಗ್ಯ ಸುಧಾರಣೆಯ ನಂತರ ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

* ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

* ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

* ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು

**<u>ಶಾಲೆಗೆ /ಅಂಗನವಾಡಿ ಹಾಜರಾಗದಿರಲು ಆರ್ಥಿಕ ಕಾರಣಗಳಿದ್ದಲ್ಲಿ.</u>**

**1. <u>ಕುಟುಂಬದಲ್ಲಿ ಯಾರೂ ವರಮಾನ ಇಲ್ಲದಿರುವವರು:</u>**

* ಮನೆಗೆ ಬೇಟಿ ನೀಡಿ ಮನೆಯಲ್ಲಿನ ವಯಸ್ಕರ ದುಡಿಮೆ ಮತ್ತು ಕುಟುಂದ ಆರ್ಥಿಕ ಪರಿಸ್ಥಿತಿಯನ್ನು ವಿಶ್ಲೇಷಿಸಬೇಕು.

* ಗ್ರಾಮ ಪಂಚಾಯತಿಯಿಂದ ಮನೆಯಲ್ಲಿನ ವಯಸ್ಕರಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಅಥವಾ ಇತರೆ ಯೋಜನೆ ಅಡಿಯಲ್ಲಿ ದುಡಿಯಲು ಅವಕಾಶವನ್ನು ಒದಗಿಸುವುದು.

* ಪೋಷಕರಿಗೆ ಮಗುವಿನ ಆರೈಕೆ ಮಾಡಲು ಆಗುವುದಿಲ್ಲ ಎಂದು ಕಂಡು ಬಂದಲ್ಲಿ ಜಿಲ್ಲೆಯಲ್ಲಿರುವ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಮಗುವಿನ ಆರೈಕೆ ಮತ್ತು ಬೆಂಬಲಕ್ಕಾಗಿ ಹಾಜರು ಪಡಿಸುವುದು.

* ಪೋಷಕರು ಮಗುವಿನ ಆರೈಕೆ ಒಪ್ಪಿ ಸಹಾಯ ಕೇಳಿದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಪ್ರಾಯೋಜಕತ್ವದ ಅಡಿಯಲ್ಲಿ ಮಗುವಿನ ಶಿಕ್ಷಣ ಮತ್ತು ಪೌಷ್ಟಿಕ ಆಹಾರಕ್ಕಾಗಿ ಮಾಸಿಕ ಸಹಾಯಧನವನ್ನು ಕೊಡಿಸುವುದು ಹಾಗೂ ಶಾಲೆಗೆ ದಾಖಲಿಸುವುದು.

* ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

* ಸೇತುಬಂಧ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಮಗುವಿನ ಶಿಕ್ಷಣದ ಮುಂದುವರಿಕೆಗಾಗಿ ಪೋಷಕರ ಒಪ್ಪಿಗೆ ಪಡೆದು ಹತ್ತಿರದ ಸರ್ಕಾರಿ ವಸತಿ ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**2. <u>ಕುಟುಂಬದ ಸದಸ್ಯರೊಂದಿಗೆ ದುಡಿಯಲು ಸಹಕರಿಸುವುದು</u>:**

- ಮನೆಗೆ ಬೇಟಿ ನೀಡಿ, ಮಗುವು ಪೋಷಕAರೊಂದಿಗೆ ಸ್ವಂತ ಕುಟುಂಬದ ಕೆಲಸ ಮಾಡುತ್ತಿದ್ದಾನೆ/ಳೆಯೋ ಅಥವಾ ದುಡಿಮೆಗೆ ಹೋಗತ್ತಿದ್ದಾರೆಯೇ? ಎಂಬುದನ್ನು ತಿಳಿದುಕೊಳ್ಳಬೇಕು.

- ಕುಟುಂಬದಲ್ಲಿಯೇ ಕೆಲಸ ಮಾಡುತ್ತಿದ್ದಲ್ಲಿ ಕೆಲಸದ ಬಗ್ಗೆ ತಿಳಿದು ಅದರಿಂದ ಮಗುವಿನ ಶಿಕ್ಷಣಕ್ಕೆ ಆಗುವ ತೊಂದರೆ ಕುರಿತು ಮನವರಿಕೆ ಮಾಡುವುದು.

- ಮಗುವಿಗೆ ಶಿಕ್ಷಣ ಕೊಡಿಸಲು ಪೋಷಕರಿಗೆ ಆರ್ಥಿಕ ತೊಂದರೆ ಇದ್ದಲ್ಲಿ ಮಗುವಿನ ಶಿಕ್ಷಣ, ಆರೈಕೆ ಮತ್ತು ಬೆಂಬಲಕ್ಕಾಗಿ ಜಿಲ್ಲೆಯಲ್ಲಿನ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು ಮತ್ತು ಸಮಿತಿ ಆದೇಶಗಳಂತೆ ಕ್ರಮ ಕೈಗೊಳ್ಳುವುದು ಮತ್ತು ಅನುಸರಣೆ ಮಾಡುವುದು.

- **ಒಂದು ವೇಳೆ ಮಗುವು ಪೋಷಕರೊಂದಿಗೆ ಅಪಾಯಕಾರಿ ಅಥವಾ ಅಪಾಯಕಾರಿ ಅಲ್ಲದ ಉದ್ದಿಮೆಯಲ್ಲಿ ದುಡಿಯುತ್ತಿದ್ದಲ್ಲಿ, ಮಗುವು ಕೆಲಸ ಮಾಡುತ್ತಿರುವ ಉದ್ದಿಮೆ ಮತ್ತು ಮಾಲೀಕರ ವಿವರಗಳನ್ನು ಪಡೆದ, ಮಕ್ಕಳ ಮತ್ತು ಕಿಶೋರಾವಸ್ಥೆಯ ಕಾರ್ಮಿಕ ಕಾಯಿದೆ ಅಡಿಯಲ್ಲಿ ತಿಳಿಸಿರುವಂತೆ ಕಾನೂನು ಮತ್ತು ಮಗುವಿನ ಪುನರ್ವಸತಿಗೆ ಕ್ರಮ ಕೈಗೊಳ್ಳುವುದು. (ಮಾಲೀಕರ ವಿರುದ್ಧ ಕೇಸ್ ದಾಖಲಿಸುವುದು, ಅಪಾಯಕಾರಿ ಉದ್ದಿಮೆ ಆದಲ್ಲಿ ರೂ 20,000/ ವಸೂಲಿ ಮಾಡಿ ಜಿಲ್ಲಾ ಪುನರ್ವಸತಿ ಯೋಜನಾ ಕಾರ್ಪಸ್ ನಿಧಿಗೆ ಜಮಾ ಮಾಡುವುದು.**

- ಮಗುವನ್ನು ಕೆಲಸದಿಂದ ಬಿಡಿಸಿ ಜಿಲ್ಲೆಯಲ್ಲಿ ಬಾಲ ಕಾರ್ಮಿಕ ಪುನರ್ವಸತಿ ಕೇಂದ್ರಗಳಿದ್ದಲ್ಲಿ ಅಂಥಹ ಕೇಂದ್ರಗಳಿಗೆ ದಾಖಲಿಸುವುದು. ಇಲ್ಲದಿದ್ದಲ್ಲಿ ಮಗುವನ್ನು ಜಿಲ್ಲೆಯಲ್ಲಿನ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ, ಸಮಿತಿ ನಿರ್ದೇಶನದಂತೆ ಮುಂದಿನ ಕ್ರಮ ಮತ್ತು ಅನುಸರಣೆ ಮಾಡುವುದು.

- ಮಗುವು ತಮ್ಮ ಮನೆಯ ಸ್ವಂತ ಕೆಲಸ ಮಾಡುತ್ತಿದ್ದು, ಪೋಷಕರಿಗೆ ಆರೈಕೆ ಮಾಡಲು ಅನುಕೂಲವಿದ್ದಲ್ಲಿ, ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಮೂಲಕ ಸ್ಥಳೀಯ ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**3. <u>ಬೀದಿಯಲ್ಲಿರುವ ಮಗುವು ಆಗಿದ್ದಲ್ಲಿ</u>:**

- ಮಗುವನ್ನು ವಿಚಾರಿಸಿ ಮಗುವಿನ ಪೋಷಕರ ಬಗ್ಗೆ ಮಾಹಿತಿ ಪಡೆದು, ಪೋಷಕರನ್ನು ಸಂಪರ್ಕಿಸಿ ವಿವರಗಳನ್ನು ಪಡೆದು ಮುಂದಿನ ಸೂಕ್ತ ಕ್ರಮಕ್ಕೆ ಜಿಲ್ಲೆಯಲ್ಲಿನ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ, ಸಮಿತಿ ನಿರ್ದೇಶನದಂತೆ ಮುಂದಿನ ಕ್ರಮ ಮತ್ತು ಅನುಸರಣೆ ಮಾಡುವುದು.

- ಮಕ್ಕಳ ಕಲ್ಯಾಣ ಸಮಿತಿಯ ಗಮನಕ್ಕೆ ತರದೆ ಅಥವಾ ಸಮಿತಿಯ ಆದೇಶಗಳಿಲ್ಲದೆ ಮಗುವನ್ನು ಪೋಷಣೆಗಾಗಿ ಯಾವುದೇ ಕುಟುಂಬಕ್ಕೆ /ವ್ಯಕ್ತಿಗೆ ಒಪ್ಪಿಸಿದಲ್ಲಿ ಬಾಲ ನ್ಯಾಯ ಕಾಯಿದೆ **2015**ರ ಪ್ರಕಾರ ಅಪರಾಧವಾಗುತ್ತದೆ.

**4. <u>ವಲಸೆ ಮಗುವಾಗಿದ್ದಲ್ಲಿ</u>:**

- ವಲಸೆ ಮಗುವನ್ನು ವಿಚಾರಿಸಿ, ಮಗುವು ಕುಟುಂಬದ ಜೊತೆಗೆ ಅಥವಾ ಒಂಟಿಯಾಗಿ ಬಂದಿರುವ ಕುರಿತು ಮಾಹಿತಿ ಪಡೆಯಬೇಕು.

- ಕುಟುಂಬದ ಜೊತೆ ಬಂದಿದ್ದಲ್ಲಿ ಪೋಷಕರಿಗೆ ಮನವೊಲಿಸಿ ಮಗುವನ್ನು ಶಾಲೆಗೆ ದಾಖಲಿಸಲು ಕ್ರಮ ಕೈಗೊಳ್ಳುವುದು. ಕರ್ನಾಟಕ ರಾಜ್ಯದ ಮಗುವಾಗಿದ್ದಲ್ಲಿ (ಈ ಮೇಲೆ ವಿವರಿಸಿರುವಂತೆ ಶಾಲೆಯಿಂದ ಹೊರಗುಳಿದ ಮಗುವನ್ನು ಶಾಲೆಗೆ ದಾಖಲಿಸುವಾಗ ಅನುಸರಿಸಬೇಕಾದ ಕ್ರಮಗಳನ್ನು ಪಾಲಿಸುವುದು).

- ವಲಸೆಯ ಮಗುವು ಬೇರೆ ರಾಜ್ಯದ ಮಗುವಾಗಿದ್ದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ, ಸಮಿತಿ ನಿರ್ದೇಶನದಂತೆ ಮುಂದಿನ ಕ್ರಮ ಮತ್ತು ಅನುಸರಣೆ ಮಾಡುವುದು.

- ಒಂದು ವೇಳೆ ಮಗುವು ಒಂಟಿಯಾಗಿ ವಲಸೆ ಬಂದಿರುವುದು ಕಂಡುಬಂದಲ್ಲಿ, ಮಗುವನ್ನು ಮುಂದಿನ ಅಗತ್ಯಕ್ರಮಕ್ಕಾಗಿ ಜಿಲ್ಲೆಯಲ್ಲಿನ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು ಮತ್ತು ಸಮಿತಿಯ ಆದೇಶಗಳಂತೆ ಮುಂದಿನ ಕ್ರಮ ಮತ್ತು ಅನುಸರಣೆ ಮಾಡುವುದು.

- ಗ್ರಾಮದಿಂದ ಕುಟುಂಬಗಳು ವಲಸೆ ಹೋಗುತ್ತಿದ್ದಲ್ಲಿ ಅವರ ಮಕ್ಕಳ ಶಿಕ್ಷಣ ಮುಂದುವರಿಸಲು ಗ್ರಾಮದಲ್ಲಿ ಅಥವಾ ಹತ್ತಿರದ ಗ್ರಾಮದಲ್ಲಿ/ಸೂಕ್ತ ಸ್ಥಳದಲ್ಲಿ ಋತುಮಾನ ವಸತಿಯುತ ಶಾಲೆಗಳನ್ನು ತೆರೆಯುವುದು ಹಾಗೂ ಋತುಮಾನ ಸೇತುಬಂಧ ಕೋರ್ಸ್‌ಗಳನ್ನು ನಡೆಸುವುದು.

- ಗ್ರಾಮೀಣ ಪ್ರದೇಶದಲ್ಲಿ ಮಕ್ಕಳೊಂದಿಗೆ ವಲಸೆ ಬಂದ ಕುಟುಂಬಗಳಿದ್ದಲ್ಲಿ, ಅವರ ಮಕ್ಕಳಿಗಾಗಿ ಗುಡಾರ ಶಾಲೆಗಳನ್ನು ವಲಸಿ ಬಿಡಾರ ಸ್ಥಳಗಳಲ್ಲಿ ಸ್ಥಾಪಿಸುವುದು, ಈ ಮಕ್ಕಳು ಔಪಚಾರಿಕ ಪಠ್ಯಕ್ರಮವನ್ನು ಅಭ್ಯಾಸ ಮಾಡುತ್ತಾರೆ. ವಲಸೆ ಅವಧಿ ಸೀಮಿತವಾದುದೆಂದು ಭಾವಿಸಿ ಗುಡಾರ ಶಾಲೆಗಳನ್ನು **06** ತಿಂಗಳವರೆಗೆ ನಡೆಸಬೇಕು. ವಲಸಿತ ಕುಟುಂಬಗಳು **6** ತಿಂಗಳಿಗಿಂತ ಹೆಚ್ಚು ಅವಧಿ ಇದ್ದಲ್ಲಿ ಗುಡಾರ ಶಾಲೆಗಳನ್ನು ಮುಂದುವರಿಸುವುದು.

**5. <u>ಅಲೆಮಾರಿ/ಕುಟುಂಬದ ಮಗುವಾಗಿದ್ದಲ್ಲಿ</u>:**

- ಮಗುವಿನ ಶಿಕ್ಷಣದ ಮಟ್ಟ ಕುರಿತು ಮಾಹಿತಿ ಪಡೆಯುವುದು, ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ ಮತ್ತು ಶಾಲೆಯ ವಿವರ.

- ಮಗುವಿನ ಶಿಕ್ಷಣದ ಮಹತ್ವವನ್ನು ಪೋಷಕರಿಗೆ ತಿಳಿಸಿ, ಅವರ ಮನವೊಲಿಸಿ, ಮಗುವಿಗೂ ಸಹ ಅಗತ್ಯವೆನಿಸಿದಲ್ಲಿ ಆಪ್ತಸಮಾಲೋಚನೆ ಮಾಡಿ ಮಗುವಿನ ಪ್ರಸ್ತುತ ಶೈಕ್ಷಣಿಕ ಮಟ್ಟ ಮತ್ತು ವಯಸ್ಸು ಆಧರಿಸಿ ಅಗತ್ಯವಿರುವ ಸೇತುಬಂಧ ಕಾರ್ಯಕ್ರಮವನ್ನು ನಡೆಸಿ, ಮಗುವನ್ನು ಶಾಲೆಗೆ ಅಥವಾ ವಸತಿ ಶಾಲೆಗೆ ದಾಖಲಿಸುವುದು.

- ಪೋಷಕರಿಗೆ ಮಗುವಿನ ಆರೈಕೆ ಮತ್ತು ಪೋಷಣೆ ತೊಂದರೆ ಆಗುತ್ತಿದೆ ಅಥವಾ ಪೋಷಕರಿಗೆ ಆರ್ಥಿಕ ಸಮಸ್ಯೆಗಳು ಇದ್ದಲ್ಲಿ, ಮಗುವನ್ನು ಜಿಲ್ಲೆಯಲ್ಲಿನ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ, ಸಮಿತಿ ನಿರ್ದೇಶನದಂತೆ ಮುಂದಿನ ಕ್ರಮ ಮತ್ತು ಅನುಸರಣೆ ಮಾಡುವುದು.

**<u>ಶಾಲೆ/ಅಂಗನವಾಡಿಗೆ ಹಾಜರಾಗದಿರಲು ಕೌಟುಂಬಿಕ ಕಾರಣಗಳಿದ್ದಲ್ಲಿ.</u>**

**1.<u>ಮಗುವು ಮನೆಗೆಲಸ ಮಾಡುತ್ತಿದ್ದಲ್ಲಿ</u>:**

- ಮಗುವು ಮನೆಗೆಲಸ ಮಾಡುತ್ತಿದ್ದಲ್ಲಿ-ಸ್ವಂತ ಮನೆಕೆಲಸವೋ ಅಥವಾ ಬೇರೆಯವರ ಮನೆಕೆಲಸವೋ ತಿಳಿಯುವುದು.

- ಪೋಷಕರಿಗೆ ಮತ್ತು ಮಗುವಿಗೆ ಮನವೊಲಿಸಿ ಶಾಲೆ ಅಥವಾ ವಸತಿ ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**2. <u>ಮದುವೆಯಾದವರು</u>:**

- ಮಗುವಿನ ವಿವಾಹದ ವಿವರಗಳನ್ನು ಪಡೆಯುವುದು ಹಾಗೂ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು. ಸಮಿತಿಯ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳುವುದು.

- ಬಾಲ್ಯವಿವಾಹ ನಿಷೇಧ ಕಾಯಿದೆ ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳುವುದು ಹಾಗೂ ಮಗುವಿನ ಶಿಕ್ಷಣ ಮುಂದುವರಿಸಲು ವಿವಾಹ ಅಡ್ಡಿಯಾಗದಂತೆ ನೋಡಿಕೊಳ್ಳುವುದು.

- ಮಗುವು ಒಂದು ವೇಳೆ ಗರ್ಭವತಿ ಆಗಿದ್ದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ ಸಮಿತಿಯ ನಿರ್ದೇಶನದಂತೆ ಕ್ರಮ ಕೈಗೊಳ್ಳುವುದು.

- ಮಗುವು ಪೋಷಕರ ಮನೆಯಲ್ಲಿ ಇರಬೇಕೆ ಅಥವಾ ಬಾಲ ಮಂದಿರದಲ್ಲಿ ಇರಬೇಕೆಂಬುದನ್ನು ಮಕ್ಕಳ ಕಲ್ಯಾಣ ಸಮಿತಿಯಿಂದ ಆದೇಶ ಪಡೆಯುವುದು ಮತ್ತು ಅನುಸರಿಸುವುದು.

- ಮಗುವು ಪೋಷಕರ ಮನೆಯಲ್ಲಿ ಇರಲು ಮಕ್ಕಳ ಕಲ್ಯಾಣ ಸಮಿತಿ ಆದೇಶಿಸಿದಲ್ಲಿ ಮಗುವಿನ ಶಿಕ್ಷಣ ಮುಂದುವರಿಸಲು ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಅಗತ್ಯ ಕ್ರಮ ಕೈಗೊಳ್ಳುವುದು.

- ಶಾಲೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ

ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**3. <u>ಮನೆಯಿಂದ ಓಡಿಹೋದ ಮಗು</u>:**

- ಮಗುವನ್ನು ಭೇಟಿ ಮಾಡಿ, ಓಡಿ ಹೋಗಲು ಕಾರಣಗಳು ಮತ್ತು ಓಡಿಹೋದ ಸಂದರ್ಭದಲ್ಲಿ ಮಗುವು ಅನುಭವಿಸಿದ ಪರಿಸ್ಥಿತಿ ಮತ್ತು ಸಂಕಷ್ಟಗಳ ಕುರಿತು ಮಾಹಿತಿ ಪಡೆದು, ವಿಶ್ಲೇಷಿಸಬೇಕು.

- ಮಗುವು ಕಡಿಮೆ ಅಪಾಯದ ಮಟ್ಟದಲ್ಲಿರುವದಾಗಿ, ಯಾವುದೇ ಆರೋಗ್ಯ ತೊಂದರೆ ಇಲ್ಲದಿದ್ದಲ್ಲಿ ಶಾಲೆ ಅಥವಾ ವಸತಿ ಶಾಲೆಗೆ ದಾಖಲಿಸಲು ಕ್ರಮ ಕೈಗೊಳ್ಳುವುದು.

- ಮಗುವು ಮನೆಯಲ್ಲಿ ಮುಂದುವರಿಯಲು ತೊಂದರೆ ಅನಿಸಿದಲ್ಲಿ ಹಾಗೂ ಮತ್ತೆ ಮಗುವು ಓಡಿಹೋಗುವ ಸಾದ್ಯತೆಗಳು ಇದೆ ಎಂದು ಕಂಡು ಬಂದಲ್ಲಿ, ಮಗುವು ಆರೋಗ್ಯ ಸಮಸ್ಯೆ ಎದುರಿಸುತ್ತದ್ದಲ್ಲಿ ಅಥವಾ ವಿವಿಧ ಸಂಕಷ್ಟಗಳಿಗೆ ಒಳಗಾಗಿದ್ದಲ್ಲಿ ಸೂಕ್ತ ಆರೈಕೆ ಮತ್ತು ರಕ್ಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**4 <u>ಸಹೋದರ/ಸಹೋದರಿಯರ ಪಾಲನೆ ಮಾಡುತ್ತಿದ್ದಲ್ಲಿ</u>.:**

- ಪೋಷಕರಲ್ಲಿ ಮಗುವಿನ ಶಿಕ್ಷಣ ಕುರಿತು ಮನವೊಲಿಸುವುದು.
- ಮಗುವು ಪಾಲನೆ ಮಾಡುತ್ತಿದ್ದ ಮಗುವಿನ ವಯಸ್ಸು **03** ರಿಂದ **06** ವರ್ಷದೊಳಗೆ ಇದ್ದಲ್ಲಿ ಸ್ಥಳೀಯ ಅಂಗನವಾಡಿ ಕೇಂದ್ರಕ್ಕೆ ದಾಖಲಿಸಲು ತಿಳಿಸುವುದು ಹಾಗೂ ಸೂಕ್ತ ಕ್ರಮಕ್ಕೆ ಸ್ಥಳೀಯ ಅಂಗನವಾಡಿ ಕಾರ್ಯಕರ್ತರ ಗಮನಕ್ಕೆ ತರುವುದು.
- ಸಹೋದರ/ಸಹೋದರಿಯರ ಪಾಲನೆಯಲ್ಲಿದ್ದ ಮಗುವನ್ನು ಶಾಲೆ ಅಥವಾ ವಸತಿ ಶಾಲೆಗೆ ದಾಖಲಿಸುವುದು. (ಶಾಲೆಗೆ ದಾಖಲಿಸುವ ಮುನ್ನ ಅನುಸರಿಸಬೇಕಾದ ಅಗತ್ಯ ಕ್ರಮಗಳನ್ನು ಅನುಸರಿಸುವುದು)
- ಒಂದು ವೇಳೆ ಪಾಲಕರು ಒಪ್ಪದಿದ್ದಲ್ಲಿ ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಅಡಿಯಲ್ಲಿ ಪೋಷಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ತಿಳಿಸುವುದು. ಆಗಲೂ ಒಪ್ಪದಿದ್ದಲ್ಲಿ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಮುಂದಿನ ಕ್ರಮಕ್ಕೆ ಹಾಜರು ಪಡಿಸುವುದು.
- ಶಾಲೆ/ಅಂಗನವಾಡಿಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.
- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.
- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**5. ಪಾಲಕರ ನಿರಾಸಕ್ತಿ:**

- ಪಾಲಕರಿಗೆ ಮಗುವಿನ ಶಿಕ್ಷಣ ಮಹತ್ವ ಕುರಿತು ಮನವೊಲಿಸುವುದು.

- ಪಾಲಕರು ಒಪ್ಪದಿದ್ದಲ್ಲಿ ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಅಡಿಯಲ್ಲಿ ಪೋಷಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ತಿಳಿಸುವುದು. ಆಗಲೂ ಒಪ್ಪದಿದ್ದಲ್ಲಿ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಮುಂದಿನ ಕ್ರಮಕ್ಕೆ ಹಾಜರು ಪಡಿಸುವುದು.

- ಪೋಷಕರು ಒಪ್ಪಿದಲ್ಲಿ, ಮಗುವಿನ ಶಿಕ್ಷಣ ಮಟ್ಟ ಕುರಿತು ಅವಲೋಕಿಸಿ, ಶಾಲೆಗೆ ಅಥವಾ ವಸತಿ ಶಾಲೆಗೆ ದಾಖಲಿಸಲು ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯ ಮೂಲಕ ಅಗತ್ಯ ಕ್ರಮ ಅನುಸರಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**6. ಪೋಷಕರಲ್ಲಿನ ಒಡಕು:**

- ಪೋಷಕರಲ್ಲಿನ ಒಡಕುನಿಂದ ಮಗುವಿನ ಮೇಲೆ ಆಗುವ ಪರಿಣಾಮ ಕುರಿತು ಹಾಗೂ ಮಗುವು ತನ್ನ ಶಿಕ್ಷಣವನ್ನು ಮುಂದುವರಿಸಲು ಸೂಕ್ತ ವಾತಾವರಣ ಇದೆಯೇ? ಎಂದು ವಿಶ್ಲೇಷಿಸಬೇಕು.

- ಮಗುವಿನ ಮುಂದಿನ ಸೂಕ್ತ ಆರೈಕೆ, ರಕ್ಷಣೆ ಮತ್ತು ಶಿಕ್ಷಣಕ್ಕಾಗಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು. ಮಕ್ಕಳ ಕಲ್ಯಾಣ ಸಮಿತಿಯ ಆದೇಶಗಳನ್ನು ಅನುಸರಿಸುವುದು.

- ಒಂದು ವೇಳೆ ಮಕ್ಕಳ ಕಲ್ಯಾಣ ಸಮಿತಿಯು ಮಗುವು ಪೋಷಕರೊಂದಿಗೆ ಇರಲು ಆದೇಶಿಸಿದಲ್ಲಿ, ಮಗುವಿನ ಶಿಕ್ಷಣ ಮಟ್ಟ ಕುರಿತು ಅವಲೋಕಿಸಿ, ಶಾಲೆಗೆ ಅಥವಾ ವಸತಿ ಶಾಲೆಗೆ ದಾಖಲಿಸಲು ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯ ಮೂಲಕ ಅಗತ್ಯ ಕ್ರಮ ಅನುಸರಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**7. <u>ವಯೋಮಾನಕ್ಕೆ ಬರುವುದು:</u>**

- ಮಗುವನ್ನು ಮತ್ತು ಪೋಷಕರನ್ನು ಬೇಟಿ ಮಾಡಿ ಮಗುವು ಶಾಲೆ ಬಿಡಿಸಿರುವುದಕ್ಕೆ ಪೋಷಕರಲ್ಲಿ ಇರುವ ಆತಂಕವನ್ನು ಅರ್ಥ ಮಾಡಿಕೊಳ್ಳುವುದು.

- ವಯೋಮಾನದ ಕಾರಣಕ್ಕೆ ಶಾಲೆ ಬಿಡಿಸುವುದರಿಂದ ಮಗುವಿನ ಮೇಲೆ ಆಗುವ ಪರಿಣಾಮ ಮತ್ತು ಹೆಣ್ಣು ಮಗುವಿನ ಶಿಕ್ಷಣ ಮಹತ್ವ ಕುರಿತು ತಿಳಿಸುವುದು ಮತ್ತು ಪೋಷಕರ ಆತಂಕವನ್ನು ದೂರಮಾಡುವುದು.

- ಮಯೋಮಾನದ ಮಗುವಿಗೆ ಅಗತ್ಯ ರಕ್ಷಣೆ ಮತ್ತು ಸೌಲಭ್ಯಗಳನ್ನು ಶಾಲೆಯಲ್ಲಿ ಒದಗಿಸುವ ಕುರಿತು ಪೋಷಕರಿಗೆ ಬರವಸೆ ಮೂಡಿಸುವುದು.

- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಶಿಕ್ಷಕ ವೃಂದದ ಮೂಲಕ ಶಾಲೆಯಲ್ಲಿ ವಯೋಮಾನದ ಮಗುವಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸುವುದು. (ನೀರು & ಶೌಚಾಲಯದ ವ್ಯವಸ್ಥೆ,ಶುಚಿ ಪ್ಯಾಡ್ ವ್ಯಸ್ಥೆ, ಪ್ಯಾಡ್ ಬದಲಾಯಿಸಿಕೊಳ್ಳಲು ಪ್ರತ್ಯೇಕ ಕೋಣೆ, ಪ್ಯಾಡ್ ವಿಲೇವಾರಿ ವ್ಯವಸ್ಥೆ ಇತ್ಯಾದಿ)

- ಮಗುವಿನ ಶಿಕ್ಷಣ ಮಟ್ಟ ಕುರಿತು ಅವಲೋಕಿಸಿ, ಶಾಲೆಗೆ ಅಥವಾ ವಸತಿ ಶಾಲೆಗೆ ದಾಖಲಿಸಲು ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯ ಮೂಲಕ ಅಗತ್ಯ ಕ್ರಮ ಅನುಸರಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**8. <u>ಮಗುವು ಅನಾಥವಾಗಿದ್ದಲ್ಲಿ</u>:**

- ಮಗುವು ಅನಾಥವಾಗಿದ್ದಲ್ಲಿ ಬಾಲ ನ್ಯಾಯ ಕಾಯಿದೆಯ ಪ್ರಕಾರ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು.

- ಅನಾಥ ಮಗುವಿನ ಪೋಷಣೆಗೆ ಸ್ಥಳೀಯರು ಆಸಕ್ತಿ ತೋರಿಸಿದಲ್ಲಿ ಅಂಥವರು ಸಮಿತಿಯ ಮುಂದೆ ಹಾಜರಾಗಿ, ತಮ್ಮ ಕೋರಿಕೆಯನ್ನು ಸಲ್ಲಿಸುವುದು.

- ಮಗುವನ್ನು ದತ್ತು ಕೊಡಲು ಮಗುವು ಅರ್ಹವೇ? ಎಂಬುದನ್ನು ಮಕ್ಕಳ ಕಲ್ಯಾಣ ಸಮಿತಿಗೆ ನಿರ್ಣಯ ತೆಗೆದುಕೊಳ್ಳಲು ಅವಕಾಶವಿದೆ. ಸಮಿತಿಯ ಮೂಲಕ/ಸಹಾಯದಿಂದ ಮುಂದಿನ ಕ್ರಮ ಅನುಸರಿಸಿ ಆಸಕ್ತರು ಮಗುವನ್ನು ನ್ಯಾಯಾಲಯದ ಮೂಲಕ/ದತ್ತು ಏಜೆನ್ಸಿ ಮೂಲಕ ದತ್ತು ಪಡೆಯುವುದು.

- ಮಕ್ಕಳ ಕಲ್ಯಾಣ ಸಮಿತಿಯ ಹಾಗೂ ನ್ಯಾಯಾಲಯದ ಆದೇಶಗಳಿಲ್ಲದೆ ಅನಾಥ ಮಗುವನ್ನು ಯಾರೂ ಕೂಡ ತಮ್ಮಲ್ಲಿ ಇಟ್ಟುಕೊಳ್ಳಲು ಅವಕಾಶ ಇರುವುದಿಲ್ಲ.

**9.<u>ಶಾಲೆಯು ಮಗುವಿನ ಮನೆಯಿಂದ ದೂರವಿರುವುದು</u>:**

- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಈ ಕುರಿತು ಪರಿಹಾರ ಕಂಡುಕೊಳ್ಳುವುದು. (ಸ್ಥಳೀಯ ವಾಹನದ ವ್ಯವಸ್ಥೆ ಆಗಬಹುದು)

- ಮಗುವಿಗೆ ಶಾಲೆಗೆ ಹಾಜರಾಗಲು ಸೌಲಭ್ಯ ಒದಗಿಸಲು ಆಗದಿದ್ದಲ್ಲಿ, ಮಗುವು ಮತ್ತು ಪೋಷಕರನ್ನು ಮನವೊಲಿಸಿ ವಸತಿ ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**10. <u>ಆಕರ್ಷಕವಿಲ್ಲದ ಶಾಲೆ:</u>**

- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಈ ಕುರಿತು ಶಿಕ್ಷಕ ವೃಂದದವರೊಂದಿಗೆ ಮತ್ತು ಶಾಲೆಯಲ್ಲಿನ ಮಕ್ಕಳೊಂದಿಗೆ ಸಮಾಲೋಚಿಸಿ ಮಕ್ಕಳ ಕಲಿಕೆ ಆಕರ್ಷಣೀಯವಾಗುವಂತೆ ಕ್ರಮ ಕೈಗೊಳ್ಳುವುದು.

- ಶಾಲೆ/ಅಂಗನವಾಡಿಯಲ್ಲಿ ಆಕರ್ಷಣೀಯವಾದ ಕಲಿಕಾ ಸಾಮಾಗ್ರಿಗಳ ಮತ್ತು ಗೋಡೆ ಚಿತ್ರಗಳನ್ನು ಹಾಕುವುದು.

- ಶಾಲೆ/ಅಂಗನವಾಡಿಯಲ್ಲಿನ ಅನುಪಯುಕ್ತ ವಸ್ತು/ಸಾಮಾಗ್ರಿಗಳನ್ನು ತೆಗೆದು ಹಾಕಿ, ಸುಣ್ಣ ಬಣ್ಣ ಮಾಡುವುದು.

- ಶಿಕ್ಷಕರ ವೃಂದ ಮಕ್ಕಳಿಗೆ ಆಕರ್ಷಣೀಯವಾಗಿ ಮಾತನಾಡುವ ಕಲೆ/ಕೌಶಲ್ಯ ವೃದ್ಧಿಸಿಕೊಳ್ಳುವುದು.

- ಶಾಲೆ/ಅಂಗನವಾಡಿಯಲ್ಲಿ ಸಹಪಾಠಿಗಳಿಂದ ಬೆದರಿಸುವ ಪ್ರಕ್ರಿಯೆಗಳಿಂದ ಮಗುವು ಶಾಲೆಯಿಂದ ದೂರ ಉಳಿದಿದ್ದಲ್ಲಿ, ಈ ಕುರಿತು ವಿಚಾರಿಸಿ, ಬೆದರಿಸಿದ ಮಕ್ಕಳಿಗೆ ಶಿಕ್ಷಕರಿಂದ ಸೂಕ್ತ ರೀತಿಯಲ್ಲಿ ತಿಳಿಹೇಳಿ, ಬೆದರಿಸುವ ಪ್ರಕ್ರಿಯೆ ಮರುಕಳಿಸದಂತೆ ಕ್ರಮ ಕೈಗೊಳ್ಳುವುದು.

- ಬೆದರಿಕೆಗೆ ಒಳಗಾದ ಮಗುವಿಗೆ ಆಪ್ತ ಸಮಾಲೋಚನೆ ನಡೆಸಿ, ಭಯದಿಂದ ಮುಕ್ತಗೊಳಿಸುವುದು.

- ಶಾಲೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ

ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.
- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.
- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**11. <u>ಮಕ್ಕಳ ನಿರಾಸಕ್ತಿ:</u>**

- ಮಗುವನ್ನು ಬೇಟಿ ಮಾಡಿ, ಆಪ್ತ ಸಮಾಲೋಚನೆ ಮೂಲಕ ಶಿಕ್ಷಣದ ಬಗ್ಗೆ ಮಗುವಿನಲ್ಲಿ ನಿರಾಸಕ್ತಿ ಉಂಟಾಗಲು ಕಾರಣಗಳನ್ನು ತಿಳಿಯುವುದು.
- ಮಗುವು ನೀಡಿದ ಕಾರಣಗಳನ್ನು ಅವಲೋಕಿಸಿ, ಮಗುವಿನ ಆತಂಕವನ್ನು ದೂರ ಮಾಡಲು ಪರಿಹಾರಗಳನ್ನು ಕಂಡುಕೊಳ್ಳಬೇಕು.
- ಮಗುವಿಗೆ ಶಿಕ್ಷಣದ ಬಗ್ಗೆ ಭರವಸೆ ಮೂಡಿಸಿ ಶಾಲೆಗೆ ದಾಖಲಿಸಬೇಕು.
- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.
- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.
- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.
- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು

ಕಾಯಿದೆ ಯಲ್ಲಿ ತಿಳಿಸಿರುವಂತೆ ಕನಿಷ್ಠ 8 ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**12. ಶಿಕ್ಷಕರ ಬಗ್ಗೆ ಭಯ:**

- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆ ಈ ಕುರಿತು ಸಂಬಂಧಪಟ್ಟ ಶಿಕ್ಷರೊಂದಿಗೆ ಚರ್ಚಿಸಿ ಅಂಥಹ ಶಿಕ್ಷಕರ ವರ್ತನೆಯಲ್ಲಿ ಬದಲಾವಣೆ ತರುವುದು.
- ಶಿಕ್ಷಕರ ವರ್ತನೆಯಲ್ಲಿನ ಬದಲಾವಣೆ ಮತ್ತು ಭಯ ಮುಕ್ತ ವಾತಾವರಣ ಕುರಿತು ಮಗುವಿನಲ್ಲಿ ಭರವಸೆ ಮೂಡಿಸುವುದು.
- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.
- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.
- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.
- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**13. ನ್ಯಾಯಾಲಯದ ತೊಡಕು:**

- ಮಗುವು ಕಾನೂನಿನ ಸಂಕಷ್ಟಕ್ಕೆ ಒಳಪಟ್ಟಿದ್ದಲ್ಲಿ, ಮಗುವಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿದೆಯೇ? ಎಂದು ತಿಳಿಯುವುದು.
- ಬಾಲ ನ್ಯಾಯ ಮಂಡಳಿಯಿಂದ ಮಗುವಿಗೆ ಸಂಬಂಧಿಸಿದಂತೆ ಆದೇಶಗಳನ್ನು ಹೊರಡಿಸಲಾಗಿದೆಯೇ?
- ಶಾಲೆಗೆ ದಾಖಲಿಸಲು ತೊಡಕು ಕಂಡುಬಂದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸುವುದು.
- ಮಗುವನ್ನು ಶಾಲೆಗೆ ದಾಖಲಿಸಲು ತೊಡಕು ಉಂಟಾಗದಿದ್ದಲ್ಲಿ ಸೂಕ್ತ ಕ್ರಮ ಅನುಸರಿಸಿ ಶಾಲೆಗೆ ದಾಖಲಿಸುವುದು.

- ಶಾಲೆಗೆ ದಾಖಲಿಸುವ ಮುನ್ನ ಮಗುವಿನ ಶೈಕ್ಷಣಿಕ ಮಟ್ಟವನ್ನು ಅವಲೋಕಿಸಬೇಕು.ಅಂದರೆ ಶಾಲೆ ಬಿಟ್ಟಾಗ ಓದುತ್ತಿದ್ದ ತರಗತಿ, ಶಾಲೆ ಬಿಟ್ಟು ಎಷ್ಟು ವರ್ಷಗಳಾಗಿದೆ ಎಂಬುದನ್ನು ಗಮನಿಸಿ, ವಯಸ್ಸಿನ ಆಧಾರದ ಮೇಲೆ ಸೇರಿಸಬೇಕಾದ ತರಗತಿಯನ್ನು ಗಮನಕ್ಕೆ ತೆಗೆದುಕೊಂಡು ಮಗುವಿಗೆ ಸೇತು ಬಂಧ ಕಾರ್ಯಕ್ರಮ ಅವಶ್ಯಕತೆ ಇದೆಯೇ? ಅಥವಾ ನೇರವಾಗಿ ಶಾಲೆಗೆ ದಾಖಲಿಸಬಹುದೇ ಎಂಬುದನ್ನು ಶಾಲಾ ಶಿಕ್ಷಕರಿಂದ ಖಾತರಿಪಡಿಸಿಕೊಳ್ಳುವುದು.

- ಸೇತುಬಂಧ ಕಾರ್ಯಕ್ರಮ ಅಗತ್ಯವಿದ್ದಲ್ಲಿ ಶಿಕ್ಷಣ ಇಲಾಖೆಯ ಶಾಲಾ ವ್ಯಾಪ್ತಿಯ ವಲಯ ಸಂಪನ್ಮೂಲ ವ್ಯಕ್ತಿಯ (ಸಿ.ಆರ್.ಪಿ.) ಸಂಯೋಜನೆಯಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು.

- ವಲಯ ಸಂಪನ್ಮೂಲ ವ್ಯಕ್ತಿಯು ಸ್ಥಳೀಯ ಶಾಲಾ ಶಿಕ್ಷಕರಿಗೆ ಸೇತುಬಂಧ ಕಾರ್ಯಕ್ರಮದ ಕಾರ್ಯತಂತ್ರ ಮತ್ತು ಬೋಧನೆ ಕುರಿತು ಅಗತ್ಯ ತರಬೇತಿ ನೀಡುವುದು ಹಾಗೂ ಮಗುವಿನ ಕನಿಷ್ಠ ಕಲಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಶಾಲೆಗೆ ದಾಖಲಿಸುವುದು.

- ಶಾಲೆ/ಅಂಗನವಾಡಿಗೆ ದಾಖಲಿಸಿದ ನಂತರ, ಮಗುವಿನ ವಿವರಗಳನ್ನು ದಾಖಲಿಸಿಕೊಂಡು ಪ್ರಾರಂಭದಲ್ಲಿ ಕನಿಷ್ಠ ವಾರಕ್ಕೊಮ್ಮೆ ನಂತರ ಪ್ರತಿ **15** ದಿನಗಳಿಗೆ ಒಂದು ಸಾರಿ ಅನುಸರಣೆ ನಡೆಸಿ ಶಾಲೆಗೆ ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿರುವಂತೆ ಕನಿಷ್ಠ **8** ನೇ ತರಗತಿ ಶಿಕ್ಷಣ ಮುಗಿಸುವ ವರೆಗೆ ಅನುಸರಣೆ ಮಾಡುವುದು ಹಾಗೂ ಸಾರ್ವತ್ರಿಕ ಧಾರಣವನ್ನು ಕಾಯ್ದುಕೊಳ್ಳುವುದು.

**ಮೇಲೆ ವಿವರಿಸಿರುವಂತೆ, ಕ್ರಮಕ್ಕೈಗೊಂಡು, ಭಾರತ ಸಂವಿಧಾನ, The Karnataka Right of Children to Free and Compulsory Education Rules, 2012 ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಆಶಯವನ್ನು, ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡುವ ಮೂಲಕ ಮಕ್ಕಳ ಶಿಕ್ಷಣದ ಹಕ್ಕನ್ನು ಜಾರಿಗೊಳಿಸಲು ಎಲ್ಲಾ ಗ್ರಾಮ ಪಂಚಾಯಿತಿಗಳು ಸಂಬಂಧಿಸಿದ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆ ಹೊಂದುವ ಮೂಲಕ ಕಟ್ಟುನಿಟ್ಟಿನ ಕ್ರಮಕ್ಕೈಗೊಳ್ಳಲು ತಿಳಿಸಿದೆ.**

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಗೆ:**

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
2) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.(ಸಂಬಂಧಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.(ಸಂಬಂಧಿಸಿದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

**ಪ್ರತಿ:**

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ,,ಇವರ ಆಪ್ತ ಕಾರ್ಯದರ್ಶಿಗಳು.,ಬಹುಮಹಡಿಗಳ ಕಟ್ಟಡ, ಬೆಂಗಳೂರು

3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ,ಬೆಂಗಳೂರು.
7) ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ.ರಸ್ತೆ, ಬೆಂಗಳೂರು.
8) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.